# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **360** |
| **ಸದಸ್ಯರ ಹೆಸರು** | **:** | **ಶ್ರೀ ಕೆ ಹರೀಶ್‌ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **:** | **15.12.2021** |
| **ಉತ್ತರಿಸುವ ಸಚಿವರು** | **:** | **ಮಾನ್ಯ ಕಂದಾಯ ಸಚಿವರು** |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ರಾಜ್ಯದಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ಮನೆಗಳನ್ನು ಕಳೆದುಕೊಂಡ ಕುಟುಂಬಗಳ ಸಂಖ್ಯೆ ಎಷ್ಟು:</td><td>ಪ್ರಸಕ್ತ ಸಾಲಿನ ಅತಿವೃಷ್ಟಿ/ಪ್ರವಾಹದಿಂದ ಒಟ್ಟು 39,975 ಮನೆ ಹಾನಿಯಾಗಿರುತ್ತದೆ.</td></tr>
<tr><td>(ಆ) ಮನೆ ಕಳೆದುಕೊಂಡ ಸಂತ್ರಸ್ಥ ಕುಟುಂಬಳಿಗೆ ಪುನರ್ ವಸತಿಯನ್ನು ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸಲಾಗಿದೆ; ಹಾಗೂ ಪುನರ್ ವಸತಿ ಕಲ್ಪಿಸಿಕೊಡಲು ಬಾಕಿ ಇರುವ ಕುಟುಂಬಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td rowspan="2">ಮನೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕಿಂತ ಈ ಕೆಳಕಂಡ ಪರಿಷ್ಕೃತ ದರದಲ್ಲಿ ಪರಿಹಾರ ಪಾವತಿಸಲಾಗುತ್ತದೆ.
<table>
<tr><th></th><th>ಮಾರ್ಗಸೂಚಿ ದರ</th><th>ಹೆಚ್ಚುವರಿ ದರ</th><th>ಒಟ್ಟು</th></tr>
<tr><td>ಪೂರ್ಣ ಮನೆ ಹಾನಿ</td><td>ರೂ.95,100/-</td><td>ರೂ.4,04,900</td><td>ರೂ.5.00 ಲಕ್ಷ</td></tr>
<tr><td>ತೀವ್ರ ಮನೆ ಹಾನಿ</td><td>ರೂ.95,100/-</td><td>ರೂ.2,049,00</td><td>ರೂ.3.00 ಲಕ್ಷ</td></tr>
<tr><td>ಭಾಗಶಃ ಮನೆ ಹಾನಿ</td><td>ರೂ.5,200/-</td><td>ರೂ.44,800</td><td>ರೂ.50,000/-</td></tr>
</table>
ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲಾಗುತ್ತಿದೆ.<br><br>
ಮನೆಹಾನಿಯಾದ ಸಂತ್ರಸ್ಥರ ಮನೆ ನಿರ್ಮಾಣದ ಹಂತಕ್ಕನುಗುಣವಾಗಿ RGRHCL ತಂತ್ರಾಂಶದ ಮೂಲಕ ಪರಿಹಾರವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.<br><br>
ಮನೆ ಹಾನಿ ಪರಿಹಾರಕ್ಕಾಗಿ ರೂ. 33286.71 ಲಕ್ಷಗಳನ್ನು ದಿನಾಂಕ:23.11.2021ರ ಆದೇಶದನುಸಾರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ.</td></tr>
<tr><td>(ಇ) ಈಗಾಗಲೇ ಮನೆ ಕಳೆದುಕೊಂಡ ಪ್ರತಿ ಸಂತ್ರಸ್ಥ ಕುಟುಂಬಗಳಿಗೆ ಎಷ್ಟು ಪರಿಹಾರವನ್ನು ಒದಗಿಸಲಾಗಿದೆ; ಯಾವ ಮಾನದಂಡದ ಆಧಾರದ ಮೇಲೆ ಒದಗಿಸಲಾಗಿದೆ:</td></tr>
</table>

| | |
|---|---|
| **(ಈ)** ಜೂನ್ ತಿಂಗಳಲ್ಲಿ ಸುರಿದ ಮಳೆಗೆ ಬಿದ್ದ ಮನೆಗಳಿಗೆ "ಕ್ಷಿಪ್ರ ಪರಿಹಾರದ ಭರವಸೆ" ಯನ್ನು ನೀಡಿ ಇಲ್ಲಿಯವರೆಗೂ ಯಾವುದೇ ಪರಿಹಾರವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? (ವಿಸ್ತೃತವಾದ ಮಾಹಿತಿಯನ್ನು ನೀಡುವುದು) | ಪ್ರಸಕ್ತ ಸಾಲಿನಲ್ಲಿ ಉಂಟಾದ ಪ್ರವಾಹದಿಂದ ತೊಂದರೆಗೊಳಪಟ್ಟಿರುವ ಸಂತ್ರಸ್ಥರಿಗೆ ತುರ್ತು ಪರಿಹಾರ ಒದಗಿಸಲು ರಾಜ್ಯ ಸರ್ಕಾರದಿಂದ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿದೆ:<br><br>ಮನೆ ಹಾನಿ ಪರಿಹಾರಕ್ಕಾಗಿ ರೂ.332.86ಕೋಟಿಗಳನ್ನು ಬಿಡುಗಡೆಗೊಳಿಸಿ, ನೆರೆ ಸಂತ್ರಸ್ಥರ ಗೃಹೋಪಯೋಗಿ ವಸ್ತುಗಳ ಹಾನಿಗೆ ಪ್ರತಿ ಕುಟುಂಬಕ್ಕೆ ತಲಾ ರೂ.10,000/-ದಂತೆ 85,862 ಸಂತ್ರಸ್ಥರಿಗೆ ರೂ.85.86ಕೋಟಿ ಹಾಗೂ ಬೆಳೆ ಹಾನಿಯಾದ 6.61ಲಕ್ಷ ಸಂತ್ರಸ್ಥರಿಗೆ ರೂ.443.14ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲಾಗಿದೆ. |

ಕಂಇ 538 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು